

ಆಸೆ ತುಂಬಿದ ಕಂಗಳಿಂದ, ಅಸಹಾಯಕತೆಯೇ ಮೈವೆತ್ತು ಅವಳು ಬೇಡುವ ಪರಿಗೆ ಒತ್ತರಿಸಿ ಬಂದ ದುಃಖಕ್ಕೆ ಎಣೆಯೇ ಇರಲಿಲ್ಲ.

ಕಡುಬಡತನಕ್ಕೆ, ಅನಕ್ಷರಸ್ಥರಾಗಿದ್ದಕ್ಕೆ, ಕೆಲಸ ಸಿಕ್ಕಿಲ್ಲದ್ದಕ್ಕೆ, ಅತ್ಯಾಚಾರಕ್ಕೊಳಗಾಗಿ ಬೀದಿಗೆ ಬಿದ್ದಿದ್ದಕ್ಕೆ, ಎಳೆಯ ವಯಸ್ಸಿಗೇ ಅರಿವಿಲ್ಲದೇ ಮದುವೆ ಮಾಡಿಸಿಕೊಂಡದ್ದಕ್ಕೆ, ಗಂಡ ಸತ್ತು ಕುಟುಂಬದ ಜವಾಬ್ದಾರಿ ಹೊರಬೇಕಾಗಿ ಬಂದಿದ್ದಕ್ಕೆ, ಯಾರೋ ಕದ್ದೊಯ್ದು ಈ ಜಾಲಕ್ಕೆ ನೂಕಿದ್ದಕ್ಕೆ, ಮಾರಾಟಕ್ಕೊಳಗಾಗಿದ್ದಕ್ಕೆ, ಪ್ರೀತಿಯ ಹೆಸರಿನ ವಂಚನೆಗೆ ಸಿಕ್ಕಿದ್ದಕ್ಕೆ, ಒಳ್ಳೆಯ ಕೆಲಸದ ಆಸೆಗಾಗಿ ಯಾರದೋ ಬಲೆಗೆ ಬಿದ್ದಿದ್ದಕ್ಕೆ, ಹಿರಿಯ ವೇಶ್ಯೆಯರು ಮನವೊಲಿಸಿ ಮೈ ಮಾರಿಕೊಳ್ಳಲು ನೂಕಿದ್ದಕ್ಕೆ, ಕಾಂಡೋಮ್ ಹಂಚುವ ಜಾಲದ ಕೈಗೆ ಅನಿರೀಕ್ಷಿತವಾಗಿ ಸಿಕ್ಕಿದ್ದಕ್ಕೆ... ಹೀಗೆ ನೂರೆಂಟು ದಯನೀಯ ಕಾರಣಗಳಿಗಾಗಿ ಸಾವಿರಾರು ಎಳೆಯ ಹೆಣ್ಣುಜೀವಗಳು ತಳಹಂತದ ವೇಶ್ಯಾವಾಟಿಕೆಯ ಬಂಧನದಲ್ಲಿ ಸಿಕ್ಕಿಹಾಕಿಕೊಂಡು ಹೊರಬರಲಾಗದೇ ಉಸಿರುಗಟ್ಟಿ ವಿಲವಿಲ ಒದ್ದಾಡುತ್ತಿರುವ ಸಂಕಟಕ್ಕೆ ಕಿವಿಯಾಗಿ ನಾವು ನೊಂದುಹೋಗಿದ್ದೆವು. ಲೈಂಗಿಕ ಕಾರ್ಯಕರ್ತೆಯರ ಸ್ಥಿತಿಗತಿ ಅಧ್ಯಯನ ಸಮಿತಿಯಿಂದ ಒಂದೂವರೆ ವರ್ಷವಿಡೀ ಕರ್ನಾಟಕದ ಮೂಲೆ ಮೂಲೆ ಸುತ್ತಿ ಇನ್ನೇನು ಸರ್ಕಾರಕ್ಕೆ ವರದಿ ಕೊಟ್ಟಾಕ್ಷಣ ಅವರ ನೋವಿಗೆ ಪರಿಹಾರ ಸಿಕ್ಕೇ ಬಿಡುತ್ತದೆಂಬ ಆಶ್ವಾಸನೆಯನ್ನು ನೀಡಿ ಬಂದು, ಈಗ್ಗೆ ಮೂರು ವರ್ಷಗಳೇ ತುಂಬುತ್ತಾ ಬಂದರೂ ಅವರ ಸ್ಥಿತಿಯಲ್ಲಿ ಒಂದಿಂಚೂ ಬದಲಾವಣೆಯಾಗಿಲ್ಲ!

ಇವರನ್ನು ಕದ್ದವರು, ಮಾರಾಟ ಮಾಡಿದವರು, ಇವರನ್ನು ಉಪಯೋಗಿಸಿಕೊಂಡು ವೇಶ್ಯಾವಾಟಿಕೆ ನಡೆಸಿದವರು ನೆಮ್ಮದಿಯಾಗಿ ತಮ್ಮ ಕೆಲಸಗಳನ್ನು ಮುಂದುವರೆಸಿದ್ದಾರೆ! ಎಲ್ಲವೂ ಕನ್ನಡಿಯಲ್ಲಿ ಕಾಣುವಷ್ಟು ನಿಚ್ಚಳವಾಗಿ ಗೋಚರಿಸುತ್ತಿದ್ದರೂ ತಪ್ಪಿತಸ್ಥರು ಸಿಕ್ಕಿಬಿದ್ದಿಲ್ಲ. ಬೀಳುವುದೂ ಇಲ್ಲ! ಅವರಿಗೆ ಶಿಕ್ಷೆಯೂ ಇಲ್ಲ. ಎಲ್ಲವೂ ಯಥಾಸ್ಥಿತಿ ಮುಂದುವರೆಯುತ್ತದೆ!

ಸರ್ಕಾರವೇ ತನ್ನ ಆರೋಗ್ಯ ಇಲಾಖೆಯ ಅಂಗಸಂಸ್ಥೆಯಾದ 'ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ'ಯ ಮೂಲಕ ಈ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಎನ್‌ಜಿಓಗಳ ಸಹಕಾರದೊಂದಿಗೆ ವಿಸ್ತೃತಜಾಲವನ್ನು ಹೊಂದಿ, ಸಮುದಾಯ ಆಧಾರಿತ ಸಂಘಟನೆಗಳ ಮೂಲಕ, ಸಹಭಾಗಿ ಲೈಂಗಿಕ ದಮನಿತರ (ವೇಶ್ಯಾವಾಟಿಕೆಗೆ ನೂಕಲಾದವರ) ಮೂಲಕ, ವೇಶ್ಯಾವಾಟಿಕೆಯಲ್ಲಿ ತೊಡಗಿರುವವರನ್ನು ಹುಡುಕಿ ನೋಂದಣಿ ಮಾಡಿಸಿ, ಅವರಿಗೆ ಕಾಂಡೋಮ್ ವಿತರಣೆ, ರಕ್ತ ಮತ್ತು ನಿಯಮಿತ ಆರೋಗ್ಯ ತಪಾಸಣೆ, ಆಪ್ತಸಮಾಲೋಚನೆ, ಏಡ್ಸ್, ಎಚ್‌ಐವಿ, ಇನ್ನಿತರ ಗುಪ್ತ ರೋಗಗಳ ನಿರ್ವಹಣೆಯ ತರಬೇತಿ ಮತ್ತು ಚಿಕಿತ್ಸೆ ನೀಡುವ ಮೂಲಕ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುತ್ತಾ 'ಸುರಕ್ಷಿತ'ಗೊಳಿಸುತ್ತಿರುವುದಾಗಿ ಹೇಳಿಕೊಳ್ಳುತ್ತಿದೆ! ಈ ಎಲ್ಲಾ ವ್ಯವಸ್ಥೆಗಾಗಿಯೇ ಬಜೆಟ್‌ನಲ್ಲಿ ದೊಡ್ಡ ಮೊತ್ತದ ಹಣವನ್ನೂ ಸರ್ಕಾರಗಳು ಪ್ರತ್ಯೇಕವಾಗಿ ತೆಗೆದಿರಿಸುತ್ತಿವೆ. ಜೊತೆಗೆ ಕೋಟಿಗಟ್ಟಲೆ ವಿದೇಶಿ ಹಣವೂ ಈ ವ್ಯವಸ್ಥೆಗಾಗಿಯೇ ಹರಿದುಬರುತ್ತಿದೆ. ರೋಗಗಳ ನಿಯಂತ್ರಣದ ಹೆಸರಿನಲ್ಲಿ ಸದ್ದಿಲ್ಲದೇ ಬೇಡಿಕೆ ಮತ್ತು ಪೂರೈಕೆಗಳನ್ನೂ ನಿರ್ವಹಿಸಲಾಗುತ್ತಿದೆ! ಆದರೆ ಅದರಡಿ ನಿತ್ಯ ಎಳೆಯ ಜೀವಗಳ ಬದುಕು ನಜ್ಜುಗುಜ್ಜಾಗುತ್ತಿವೆ.

ಕರ್ನಾಟಕ ಏಡ್ಸ್ ನಿಯಂತ್ರಣ ಮಂಡಳಿಯಡಿ, 'ಸುರಕ್ಷಿತ ಲೈಂಗಿಕತೆ'ಯನ್ನು ಜಾರಿಯಲ್ಲಿಡಲು ನೊಂದಾಯಿತರಾದ 96,878 ಲೈಂಗಿಕ ದಮನಿತರಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು 429 ಮಂದಿ ಮತ್ತು 12,185 ದಮನಿತರು 18ರಿಂದ 24 ವರ್ಷದವರೆಂದು ವರದಿಯಲ್ಲಿ ದಾಖಲಾಗಿದೆ! ಈ 12,185 ದಮನಿತರಲ್ಲಿ ಹೆಚ್ಚಿನವರು ಅಪ್ರಾಪ್ತರೇ ಆಗಿದ್ದಾರೆ. ಏಕೆಂದರೆ ಒಟ್ಟು ದಮನಿತರಲ್ಲಿ ಶೇ. 50ರಷ್ಟು ಹೆಣ್ಣುಮಕ್ಕಳನ್ನು ಸರಾಸರಿ 14–16 ವಯಸ್ಸಿನಲ್ಲೇ ವೇಶ್ಯಾವಾಟಿಕೆಗೆ ತಳ್ಳಲಾಗಿರುವುದು ವರದಿಯಲ್ಲಿ ದಾಖಲಾಗಿದೆ. ಆದರೂ ಅವರ ವಯಸ್ಸನ್ನು ಅಧ್ಯಯನಕ್ಕೊಳಪಡಿಸುವ ಯಾವ ಕೆಲಸವನ್ನೂ ಆರೋಗ್ಯ ಇಲಾಖೆ ಇದುವರೆಗೆ ಮಾಡಿಲ್ಲ. ಹೀಗಾಗಿ ಸರ್ಕಾರದ 'ಸುರಕ್ಷಿತ ಲೈಂಗಿಕತೆ'ಗಾಗಿನ ಕಾಂಡೋಮ್ ಹಂಚಿಕೆಯ ಜಾಲದಡಿಯೇ ದಾಖಲಾದ ಸಾವಿರಾರು ಅಪ್ರಾಪ್ತ ವಯಸ್ಸಿನ ಬಾಲೆಯರು, ವೇಶ್ಯಾವಾಟಿಕೆಯಲ್ಲಿ ಅನಿವಾರ್ಯವಾಗಿ ತೊಡಗಿಕೊಂಡಿದ್ದಾರೆ. ಮತ್ತು ನಿತ್ಯ ಹಲವು ಬಾರಿ ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ! ಆದರೆ ಅವರನ್ನು ರಕ್ಷಿಸಬೇಕಿರುವ ಪ್ರಭುತ್ವ ಮತ್ತು ವ್ಯವಸ್ಥೆ ಕುರುಡಾಗಿದೆ. ಇದೆಲ್ಲವೂ ದಾಖಲಾದವರ ಅಂಕಿ ಸಂಖ್ಯೆಯಷ್ಟೇ! ದಾಖಲಾಗದ ಲಕ್ಷಗಳು ಅದೆಷ್ಟೋ!

ಇದರಾಚೆಗೆ ಕಾಂಡೋಮ್ ವಿತರಣೆಯ ಸಾಂಸ್ಥಿಕ ವ್ಯವಸ್ಥೆಯ ಮೂಲಕವೇ ಮಹಿಳೆ ಮತ್ತು ಅಪ್ರಾಪ್ತ ಬಾಲೆಯರು ಈ ಮಾರಾಟ ಜಾಲದೊಳಗೆ ಬೀಳುತ್ತಿರುವ ನಿದರ್ಶನಗಳಿವೆ. 'ಕೆಲಸ ಕೊಡುತ್ತೇವೆ ಬನ್ನಿ' ಎಂದು ಕಾಂಡೋಮ್ ಹಂಚಲು ಎನ್‌ಜಿಓ, ಸಿಬಿಓಗಳು, ಪೀರ್‌ವರ್ಕರ್‌ಗಳು, ಮುಗ್ಧ ಎಳೆಯ ಹೆಣ್ಣುಮಕ್ಕಳನ್ನು ನಿರಂತರವಾಗಿ ಈ ದಂಧೆಯೊಳಗೆ ದಾಖಲು ಮಾಡುವುದೂ, ಆ ಪ್ರಮಾಣ ಶೇ.19ರಷ್ಟಿದೆ ಎನ್ನುವ ಅತ್ಯಂತ ಆತಂಕಕಾರಿಯಾದ ಅಂಶವೂ ಅಧ್ಯಯನದಿಂದ ಸಾಬೀತಾಗಿದೆ. ವೇಶ್ಯಾವಾಟಿಕೆ ನಡೆಸಿ ಬದುಕಲು ಸಾಧ್ಯವಿಲ್ಲದ ವಯಸ್ಸಾದ ಶೇ. 10ರಷ್ಟು ಲೈಂಗಿಕ ದಮನಿತರೂ, ಹೊಸ ಹೆಣ್ಣುಮಕ್ಕಳನ್ನು ವೇಶ್ಯಾವಾಟಿಕೆಯೊಳಗೆ ಕರೆತಂದು ತಾವೇ ಮಧ್ಯಸ್ಥಿಕೆ ವಹಿಸಿ ಅವರನ್ನಿಟ್ಟುಕೊಂಡು ವ್ಯವಹಾರ ನಡೆಸುತ್ತಿರುವ ಭೀಕರ ಸತ್ಯವೂ ಅಧ್ಯಯನದ ವೇಳೆ ಹೊರಬಿದ್ದಿದ್ದು ಕ್ರೌರ್ಯದ ಪರಮಾವಧಿಯನ್ನು ತಲುಪಿರುವ ನಾಗರಿಕ ಸಮಾಜಕ್ಕೆ ಉದಾಹರಣೆಯಂತಿದೆ.

ವೇಶ್ಯಾವಾಟಿಕೆಯ ಜಾಲದಲ್ಲಿ ಬಿದ್ದಿರುವ ಶೇ.